# “ಮಂಗಳಗೌರಿವ್ರತ”



## ೧. ಈ ವ್ರತವನ್ನು ಯಾವಾಗ ಮಾಡಬೇಕು?

ಶ್ರಾವಣ ಮಾಸದ ಪ್ರತಿಮಂಗಳವಾರ. ಅಕಸ್ಮಾತ್ ಮಂಗಳವಾರ ಏಕಾದಶಿಯಾದರೆ, ಮಂಗಳಗೌರಿ ಪೂಜೆಯನ್ನು ದ್ವಾದಶಿ ಮಾಡಬಹುದು. ರಜಸ್ವಲದೋಷ ಸಮಯದಲ್ಲಿ ಮಂಗಳವಾರವಾದರೆ, ಮುಂದಿನ ಶುಕ್ರವಾರ ಮಾಡುವ ಸಂಪ್ರದಾಯವಿದೆ.

## ೨. ಯಾವ ದೇವತೆಯನ್ನು ಕುರಿತು ಈ ಪೂಜೆ ಮಾಡುತ್ತಾರೆ?

ಮಂಗಳಗೌರಿ ಅಂದರೆ ಉಮಾದೇವಿಯರು ಅಂದರೆ ಸಾಕ್ಷಾತ್ ಪಾರ್ವತೀ ದೇವಿಯನ್ನು ಕುರಿತು ಪೂಜಿಸುತ್ತಾರೆ. ಬರೀ ಗೌರಿಯನ್ನು ಪೂಜಿಸಬಾರದು. ಅವಳೊಟ್ಟಿಗೆ ಮನೋ ನಿಯಾಮಕ ರುದ್ರದೇವರನ್ನೂ ಆಹ್ವಾನಿಸಿ ಪೂಜಿಸಬೇಕು.

## ೩. ಯಾರು ಈ ವ್ರತವನ್ನು ಮಾಡತಕ್ಕದ್ದು? ಎಷ್ಟು ವರ್ಷ ಮಾಡತಕ್ಕದ್ದು?

# “ಮಂಗಳಗೌರಿವ್ರತ”

ವಿವಾಹಾತ್ ಪ್ರಥಮಂ ವರ್ಷಮಾರಭ್ಯ ಆಪಂಚವರ್ಷಕಂ ।
ಶ್ರಾವಣೇ ಮಾಸಿ ಭೌಮೇಷು ಚತುರ್ಷು ವ್ರತಮಾಚರೇತ್ ।
ವ್ರತರಾಜನಾಮಾಸ್ಯ ಮಂಗಳಾಗೌರೀವ್ರತಂ ಪಾಪಪ್ರಣಾಶನಮ್।

ನೂತನ ವಿವಾಹವಾದ ಹೆಣ್ಣು ಮಕ್ಕಳು ವಿವಾಹವಾದ ಪ್ರಥಮ ವರ್ಷದಿಂದ ಹಿಡಿದು ಐದು ವರ್ಷಗಳ ಕಾಲ ಈ ವ್ರತವನ್ನು ಮಾಡತಕ್ಕದ್ದು.

## ೪. ಎಲ್ಲಿ ಈ ವ್ರತವನ್ನು ಆಚರಿಸಬೇಕು?

ಪ್ರಥಮೇ ವತ್ಸರೇ ಮಾತು: ಗೇಹೇ ಕರ್ತವ್ಯಮೇವ ಚ ।
ತತೋ ಭರ್ತೃಗೃಹಂ ಕಾರ್ಯಮವಶ್ಯಂ ಸ್ತ್ರೀಭಿರಾದರಾತ್ ।

ಸಾಮಾನ್ಯವಾಗಿ ವಿವಾಹವಾದ ಮೊದಲ ವರ್ಷ ತನ್ನ ತವರು ಮನೆಯಲ್ಲಿ ಮತ್ತು ಮುಂದಿನ ವರ್ಷದಿಂದ ತನ್ನ ಗಂಡನ ಮನೆಯಲ್ಲಿ ಮಾಡತಕ್ಕದ್ದು.

ಮಂ ಅನಿಷ್ಟನಿಚಯಂ ಗಮಯತಿ ಇಷ್ಟಾರ್ಥಂ ಚ ಲಾತೀತಿ ।
ಮಂಗಳಾ । ಮಂಗಳಾ ಚ ಸಾ ಗೌರೀ ಚ ಮಂಗಳಾ ಗೌರೀ ॥

## ೫. ಏತಕ್ಕಾಗಿ ಹೆಣ್ಣು ಮಕ್ಕಳು ಮಂಗಲಗೌರೀ ವ್ರತವನ್ನು ಆಚರಿಸುತ್ತಾರೆ?

ಹೆಣ್ಣು ಮಕ್ಕಳು ಈ ವ್ರತವನ್ನು ತಮ್ಮ ಸೌಭಾಗ್ಯಭಾಗ್ಯಕ್ಕಾಗಿ, ಪುತ್ರ ಪೌತ್ರ ಸಂಪತ್ತಭಿವೃದ್ಧಿಗಾಗಿ ಮಾಡುತ್ತಾರೆ.

## ಮಂಗಳಗೌರಿ ಪೂಜೆಯಲ್ಲಿ ಚಿಂತನ ಕ್ರಮ –

ವಿಷ್ಣುಸ್ಮೃತಿ ವಿಹೀನಾ ತು ಪೂಜಾ ಸ್ಯಾದಾಸುರೀ ಮತಾ ।
ಗೃಹ್ಣಂತಿ ದೇವತಾ ನೈತಾಂ ತತ: ಸ್ಯಾದ್ ದೇಶ ವಿಪ್ಲವ: ।
ಸಂಸ್ಕೃತೋ ಭಗವಾನ್ ವಿಷ್ಣು: ಸರ್ವಮಂಗಲಮಂಗಲ: ।
ಸಮಸ್ತಾಭೀಷ್ಟದಾಯೀ ಸ್ಯಾತ್ ತೇನ ಧ್ಯೇಯೋ ಅಖಿಲೈ:ಜನೈ:।

ಓಂ ಭೂ: ಮಂಗಲಗೌರ್ಯಂತರ್ಗತ, ವಾಯ್ವಂತರ್ಗತ
ಶ್ರೀ ಜಯಾಪತಿ ಸಂಕರ್ಷಣಂ ಅವಾಹಯಾಮಿ ।
ಓಂ ಭುವ:, ಮಂಗಲಗೌರ್ಯಂತರ್ಗತ ವಾಯ್ವಂತರ್ಗತ
ಶ್ರೀ ಜಯಾಪತಿ ಸಂಕರ್ಷಣಂ ಆವಾಹಯಾಮಿ ।
ಓಂ ಸ್ವ: ಮಂಗಲಗೌರ್ಯಂತರ್ಗತ ವಾಯ್ವಂತರ್ಗತ
ಶ್ರೀ ಜಯಾಪತಿ ಸಂಕರ್ಷಣಂ ಆವಾಹಯಾಮಿ ।
ಓಂ ಭೂರ್ಭುವಸ್ವ: ಶ್ರೀಮಂಗಲಗೌರ್ಯಂತರ್ಗತ ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಜಯಾಪತಿ ಸಂಕರ್ಷಣಂ ಆವಾಹಯಾಮಿ। ಸ್ಥಾಪಯಾಮಿ । ಪೂಜಯಾಮಿನಮ: । ಓಂ ಓಂ ನಮೋ ನಾರಾಯಣಾಯ ।

## ವ್ರತಕ್ಕೆ ಬೇಕಾದ ಸಲಕರಣೆಗಳು –

ಅ. ಭೀಮನ ಅಮಾವಾಸ್ಯೆ ದಿನ ಅತ್ತೆ ಮನೆಯವರು ಕೊಟ್ಟ ಮಂಗಳಗೌರಿ.

ಆ. ಹದಿನಾರು ವಿಳ್ಯೆದೆಲೆ, ಹದಿನಾರು ಅಡಿಕೆ

ಇ. ಒಣಕೊಬ್ಬರಿ ಬಟ್ಟಲು ೨ (ಅದರಲ್ಲಿ ಎಂಟು+ಎಂಟು ಅಡಿಕೆ ಇಡಬೇಕು)

ಈ. ಗೌರಿಗೆ ಅರಿಷಿನ, ಕುಂಕುಮ, ಗೆಜ್ಜೆವಸ್ತ್ರ, ಹೂ

ಉ. ತಾಯಿ ಬಾಗಿನ (ಐದನೇ ವರ್ಷದಲ್ಲಿ ಮಾತ್ರ)

ಊ. ತಂಬಿಟ್ಟು ಮಾಡಿಕೊಂಡಿರಬೇಕು (ಅಕ್ಕಿಹಿಟ್ಟು, ಹುರಿಗಡ್ಲೆ ಅಥವಾ ಗೋಧಿಹಿಟ್ಟಿನಿಂದ ಮಾಡಿಕೊಳ್ಳಬೇಕು)

ಋ. ಬ್ಲೌಸ್ ಪೀಸ್ ಖಣ – ಐದು

## ಮಂಗಳಗೌರಿ ಪೂಜಾ ವಿಧಾನ –

೧. ಆಚಮನ, ಪ್ರಾಣಾನಾಯಮ್ಯ, ಮಾಡುವುದು

೨. ಸಂಕಲ್ಪ – ಅದ್ಯ ಪೂರ್ವೋಚ್ಚರಿತ ಏವಂಗುಣ ವಿಶಿಷ್ಟಾಯಾಂ, ಶುಭತಿಥೌ, __________ಸಂವತ್ಸರೇ. ಶ್ರಾವಣಮಾಸೇ,_______ಪಕ್ಷೇ,_________ತಿಥೌ, ಭೌಮ ವಾಸರೇ, ಮಮ ಪುತ್ರ ಪೌತ್ರಭಿವೃದ್ಧರ್ಥಂ, ಅವೈಧವ್ಯ, ಆಯುರಾರೋಗ್ಯಾದಿ ಸಕಲಾಭೀಷ್ಟ ಸಿದ್ಧಿದ್ವಾರಾ, ಶ್ರೀ ಶಿವ ಮಂಗಳಾಗೌರ್ಯಂತರ್ಗತ ಶ್ರೀ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ಜಯಾಪತಿ ಸಂಕರ್ಷಣ ಪ್ರೀತ್ಯರ್ಥಮ್, ಪಂಚವರ್ಷ ಪರ್ಯಂತಂ ಮಂಗಲಗೌರೀವ್ರತಮ್ ಅಹಂ ಕರಿಷ್ಯೇ.

೩. ಘಂಟಾನಾದ:

ಆಗಮಾರ್ಥಂತು ದೇವಾನಾಂ ಗಮನಾರ್ಥಂ ತು ರಕ್ಷಸಾಮ್ ।
ಕುರು ಘಂಟಾರವಂ ತತ್ರ ದೇವತಾಹ್ವಾನಲಾಂಛನಂ ।

## ೪. ಗಣಪತಿಪೂಜಾ –

**(ಅಡಿಕೆಯನ್ನಾಗಲಿ ಅಥವ ಗಣಪತಿಯ ವಿಗ್ರಹವನ್ನಾಗಲಿ ಇಟ್ಟು ಪೂಜಿಸಬೇಕು)**

**ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।**
**ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ।**
**ವಿದ್ಯಾರಂಭೇ ವಿವಾಹೇ ಚ ಪ್ರವೇಶೇ ನಿರ್ಗಮೇ ತಥಾ ।**
**ಸಂಗ್ರಾಮೇ ಸರ್ವಕಾರ್ಯೇಷು ವಿಘ್ನಸ್ತಸ್ಯ ನ ಜಾಯತೇ ।**
**ಗಣಪತಿ ಅನುಗ್ರಹಸಿದ್ಧಿರಸ್ತು।**

## ೫. ಶಂಖಪೂಜಾ –

**ತ್ವಂ ಪುರಾ ಸಾಗರೋತ್ಪನ್ನೋ ವಿಷ್ಣುನಾ ವಿಧೃತ: ಕರೇ ।**
**ನಮಿತ: ಸರ್ವದೇವೈಶ್ಚ ಪಾಂಚಜನ್ಯ ನಮೋಸ್ತುತೇ।**

## ೬. ಕಲಶಸ್ಥಾಪನಮ್ –

ಫಲಪುಷ್ಪಪತ್ರಾದಿನಾ ಮಂಟಪಮಲಂಕೃತ್ಯ ತನ್ಮಧ್ಯೇ ತಂಡುಲಾನಿ ಸ್ಥಾಪಯೇತ್ । ತದುಪರಿ ಚಿತ್ರವರ್ಣೇನಾಷ್ಟದಲಪದ್ಮಂ ಲಿಖಿತ್ವಾ ತನ್ಮಧ್ಯೇ ಪ್ರಕ್ಷಾಲಿತಂ ಸ್ವರ್ಣರಜತ ತಾಮ್ರಮೃಣ್ಮಯ್ಯನ್ಯತಮಪಾತ್ರಂ ಧೂಪಾದಿನಾ ವಿಶೋಧ್ಯ ಸಂಸ್ಥಾಪ್ಯ, ಧಾನ್ಯೋಪರಿ ಕಲಶೇ ಸ್ಥಾಪಯೇತ್।

**ಭೂ: ವರುಣಮಾವಾಹಯಾಮಿ । ಭುವ ವರುಣಂ ।**
**ಸ್ವ: ವರುಣಂ । ಭೂರ್ಭುವ: ಸ್ವ: ವರುಣಮಾವಾಹಯಾಮಿ ।**
**ಕಲಶಸ್ಯ ಮುಖೇ ವಿಷ್ಣು ಕಂಠೇ ರುದ್ರ ಸಮಾಶ್ರಿತ: ।**

ಮೂಲೇ ತತ್ರ ಸ್ಥಿತೋ ಬ್ರಹ್ಮಾ ಮಧ್ಯೇ ಮಾತೃಗಣಾ: ಸ್ಮೃತಾ:।
ಕುಕ್ಷೌತು ಸಾಗರಾ: ಸರ್ವೇ ಸಪ್ತದ್ವೀಪಾ ವಸುಂದರಾ।
ಋಗ್ವೇದೋಥ ಯಜುರ್ವೇದ: ಸಾಮವೇದೋಹ್ಯಥರ್ವಣ: ।
ಅಂಗೈಶ್ಚ ಸಹಿತಾ: ಸರ್ವೇ ಕಲಶಾಂಬುಸಮಾಶ್ರಿತಾ: ।

## ೭. ಮಂಟಪ ಪೂಜಾ –

ಉತ್ತಪ್ತೋಜ್ಜ್ವಲಕಾಂಚನೇನ ರಚಿತಂ ತುಂಗಾಂಗರಂಗಸ್ಥಲಮ್।
ಶುದ್ಧಸ್ಫಾಟಿಕಾವಿಲಸಿತೈ: ಸ್ತಂಭೈಶ್ಚ ಹೈಮೈ:ಶುಭೈ:।
ಮುಕ್ತಾಜಾಲ ವಿಲಂಬಮಂಟಪಯುತಂ ವಜ್ರೈಶ್ಚ ಸೋಪಾನಕೈ:।
ನಾನಾರತ್ನ ವಿರಾಜಿತೈಶ್ಚ ಕಲಶೈರತ್ಯಂತಶೋಭಾವಹಮ್ ।

## ೮. ದ್ವಾರಪಾಲಪೂಜಾ –

ಪೂರ್ವದ್ವಾರೇ ಶ್ರಿಯೈ ನಮ:। ಧಾತ್ರೇ ನಮ: । ವಿಧಾತ್ರೇ ನಮ:।ದಕ್ಷಿಣದ್ವಾರೇ ಶ್ರಿಯೈ ನಮ: । ಚಂಡಾಯ ನಮ: । ಪ್ರಚಂಡಾಯ ನಮ:। ಪಶ್ಚಿಮದ್ವಾರೇ ಶ್ರಿಯೈ ನಮ: । ಶಂಖನಿಧಯೇ ನಮ: । ಪದ್ಮನಿಧಯೇ ನಮ: । ಉತ್ತರದ್ವಾರೇ ದ್ವಾರಶ್ರಿಯೈ ನಮ: । ಗಂಗಾಯೈ ನಮ: । ಯಮುನಾಯೈ ನಮ: ।

## ೬. ಆಸನವಮ್, ಪಾದ್ಯಮ್, ಅರ್ಘ್ಯಮ್, ಇತರ ಪೂಜಾ ಸಮರ್ಪಣ :

ಶ್ರೀಮಂಗಲಗೌರ್ಯೈ ನಮ: । ಆವಾಹಯಾಮಿ ।
ಆವಾಹನಂ ಸಮರ್ಪಯಾಮಿ ।
ಪಾದ್ಯಂ ಸಮರ್ಪಯಾಮಿ ।
ಅರ್ಘ್ಯಮ್ ಸಮರ್ಪಯಾಮಿ ।
ಆಚಮನಂ ಸಮರ್ಪಯಾಮಿ ।
ಮಧುಪರ್ಕಂ ಸಮರ್ಪಯಾಮಿ ।
ಪಂಚಮೃತ ಸ್ನಾನಂ ಸಮರ್ಪಯಾಮಿ ।
ಶುದ್ಧೋಧಕಸ್ನಾನಮ್ ಸಮರ್ಪಯಾಮಿ ।
ವಸ್ತ್ರಂ ಸಮರ್ಪಯಾಮಿ ।
ಹರಿದ್ರಾಕುಂಕುಮಾನಿ ಸಮರ್ಪಯಾಮಿ ।
ಮಂಗಲಸೂತ್ರಾನಿ ಸಮರ್ಪಯಾಮಿ ।
ಗಂಧಂ ಸಮರ್ಪಯಾಮಿ ।
ಅಕ್ಷತಾಂ ಸಮರ್ಪಯಾಮಿ ।
ನಾನಾವಿಧ ಪರಿಮಳ ಪುಷ್ಪಾಂ ಸಮರ್ಪಯಾಮಿ ।
ಪತ್ರಂ ಸಮರ್ಪಯಾಮಿ ।
ನಾನಾವಿಧ ಪತ್ರಂ ಸಮರ್ಪಯಾಮಿ ।

ನಾಮಪೂಜಾಂ ಸಮರ್ಪಯಾಮಿ। ಸರ್ವಮಂಗಲಾಯೈ ನಮಃ। ದುರ್ಗಾಯೈ: ನಮ: ಪಾರ್ವತ್ಯೈನಮ: । ರುದ್ರಾಣ್ಯೈ। ಬ್ರಹ್ಮಾಣ್ಯೈ। ಲೋಕಜನನ್ಯೈ। ಶಿವಾಯೈ। ಭವಹಂತ್ರ್ಯೈ ಸರಸ್ವತ್ಯೈ। ಪರ್ಣಾಯೈ। ಚಂಡಿಕಾಯೈ।ಚಂಡಾಯೈ। ಮಂದಗಾಮಿನ್ಯೈ। ಸರ್ವಾಭರಣಭೂಷಿತಾಯೈನಮಃ। ಶ್ರೀಮಂಗಲಗೌರ್ಯೈ ನಮಃ।

ಧೂಪಂಆಘ್ರಾಪಯಾಮಿ – ಧೂಪ ಸಮರ್ಪಿಸುವುದು

ದೀಪಂ ದರ್ಶಯಾಮಿ – ದೀಪ ಜ್ವಲನ ಮಾಡುವುದು

## ನೈವೇದ್ಯಂ ಸಮರ್ಪಯಾಮಿ –

(ಮೊದಲು ದೇವರಿಗೆ ನೈವೇದ್ಯವನ್ನು ಮಾಡಿ ಶಂಖಕ್ಕೆ ತೀರ್ಥ ಕೊಟ್ಟು ಮುಖ್ಯಪ್ರಾಣದೇವರ ನೈವೇದ್ಯಾನಂತರ ಶಿವ ಮತ್ತು ಮಂಗಲಗೌರಿಯರಿಗೆ ನೈವೇದ್ಯ ಮಾಡಬೇಕು)

(೧೬ ತಂಬಿಟ್ಟಿನ ಆರತಿಯನ್ನು ಮಾಡಬೇಕು)

ಶ್ರೀಮಂಗಲಗೌರ್ಯೈ ನಮ: । ನೈವೇದ್ಯಂ ಸಮರ್ಪಯಾಮಿ । ಶ್ರೀಮಂಗಲಗೌರ್ಯೈ ನಮಃ। ಮಧ್ಯೇ ಪಾನೀಯಂ ಸಮರ್ಪಯಾಮಿ । ಉತ್ತರಾಪೋಶನಂ।ಹಸ್ತಪ್ರಕ್ಷಾಲನಂ। ಪುನರಾಚನೀಯಂ ಸಮರ್ಪಯಾಮಿ ।

## ೧೦. ಫಲಸಮರ್ಪಣಮ್ – ನಾನಾ ವಿಧ ಫಲಾನಿ

ಸಮರ್ಪಯಾಮಿ – ಹಣ್ಣುಗಳನ್ನು ಸಮರ್ಪಿಸುವುದು

ತಾಂಬೂಲಂ ಸಮರ್ಪಯಾಮಿ। ದಕ್ಷಿಣಾಂ ಸಮರ್ಪಯಾಮಿ। ನೀರಾಜನಂ ಸಮರ್ಪಯಾಮಿ। ಮಂತ್ರಪುಷ್ಪಂ ಸಮರ್ಪಯಾಮಿ। ಪ್ರದಕ್ಷಿಣ ನಮಸ್ಕಾರಾಂ ಸಮರ್ಪಯಾಮಿ ।

## ೧೧. ಪ್ರಾರ್ಥನ –

ಆವಾಹನಂ ನ ಜಾನಾಮಿ ನ ಜಾನಮಿ ತವಾರ್ಚನಂ ।
ಪೂಜಾಂ ಚೈವ ನ ಜಾನಾಮಿ ಕ್ಷಮ್ಯತಾಂ ಪರಮೇಶ್ವರಿ ।
ಪುತ್ರಾಂ ದೇಹಿ ಧನಂ ದೇಹಿ ಸೌಭಾಗ್ಯಂ ದೇಹಿ ಮಂಗಲೇ ।
ಅನ್ಯಾಂಶ್ಚ ಸರ್ವಕಾಮಾಂಶ್ಚ ದೇಹಿ ದೇವಿ ನಮೋಸ್ತು ತೇ ।
ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಸುರೇಶ್ವ್ವರಿ ।
ಯತ್ಪೂಜಿತಂ ಮಯಾ ದೇವಿ ಪರಿಪೂರ್ಣಂ ತದಸ್ತುಮೇ ।

ಅನೇನ ಶ್ರೀ ಮಂಗಲ ಗೌರೀಪೂಜನೇನ ಶ್ರೀಮಂಗಲ ಗೌರ್ಯಂತರ್ಗತ ಭಾರತೀರಮಣ ಮುಖ್ಯಾಂತರ್ಗತ ಜಯಪಾತಿ ಸಂಕರ್ಷಣಾಭಿನ್ನ: ಶ್ರೀ ಲಕ್ಷ್ಮೀ ನಾರಾಯಣ: ಪ್ರಿಯತಾಮ್। ಶ್ರೀ ಕೃಷ್ಣಾರ್ಪಣಮಸ್ತು ।

## ೧೨. ಉಪಾಯನದಾನಮ್ – ಉಪಾಯನದಾನಕ್ಕೆ ಒಂದು ತಟ್ಟೆಯಲ್ಲಿ ಅಕ್ಕಿ, ಎರಡು ತೆಂಗಿನಕಾಯಿ ಅಥವ ಅಥವಾ ಹಣ್ಣು, ವಿಳ್ಳೆದೆಲೆ, ಅಡಕೆ, ಯಥಾಶಕ್ತಿ ದಕ್ಷಿಣೆ ಇಟ್ಟಿರಬೇಕು.

ಅಥ ಪೂರ್ವೋಚ್ಚರಿತೈವಂ ಗುಣವಿಶೇಷಣವಿಶಿಷ್ಟಾಯಾಂ ಶುಭ ಪುಣ್ಯತಿಥೌ ಮಮ ಸಕುಂಟುಂಬಾಯಾ: ಪುರಾಣೋಕ್ತಫಲ ಪ್ರಾಪ್ತ್ಯರ್ಥಂ ಮಂಗಲಗೌರೀ ಕಲ್ಪೋಕ್ತ ಪೂಜಾ ಸಂಪೂರ್ಣ ಫಲಪ್ರಾಪ್ತ್ಯರ್ಥಂ ಬ್ರಾಹ್ಮಣ ಸುವಾಸಿನೀಭ್ಯ ಉಪಾಯನದಾನಂ ಕರಿಷ್ಯೇ । ತಥಾ ಶೋಡಶ ಸುವಾಸಿನೀ ಸಹಿತಬ್ರಾಹ್ಮಣೇಭ್ಯ: ಅನ್ನದಾನಂ ಚ ಕರಿಷ್ಯೇ ।

ಮಂಗಲಗೌರ್ಯಂತರ್ಗತ, ಶ್ರೀಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಲಕ್ಷ್ಮೀನಾರಾಯಣಂ ಭವತ್ಸು ಆವಾಹಯಿಷ್ಯೇ (ಅಕ್ಷತೆ ಹಾಕಿ), ಇದಮಾಸನಂ (ಸುಖಾಸನಂ), ಇದಂ ಪಾದ್ಯಂ, ಇದಮರ್ಘ್ಯಂ , ಇದಮಾಚಮನೀಯಂ ।

ಇಮೇ ವೋ ಗಂಧಾ: ಪಾಂತು । ಅಕ್ಷತಾ: ಪಾಂತು ।
ಪುಷ್ಪಾಣಿ ಪಾಂತು । ತಾಂಬೂಲಾನಿ ಪಾಂತು ।

ಉಪಾಯನಮಿದಂ ದೇವಿ ವ್ರತಸಂಪೂರ್ತಿ ಹೇತವೇ ।
ವೈಣಕಂ ದ್ವಿಜವರ್ಯಾಯ ಸಹಿರಣ್ಯಂ ದದಾಮ್ಯಹಮ್ ।
ಇದಂ ಸಹಿರಣ್ಯಂ ಸದಕ್ಷಿಣಾಕಂ ಸತಾಂಬೂಲಮುಪಾಯನಂ
ತುಭ್ಯಮಹಂ ಸಂಪ್ರದದೇ । ಪ್ರತಿಗೃಹ್ಯತಾಮ್ ।

ಉಪಾಯನದಾನವನ್ನು ಯೋಗ್ಯಬ್ರಾಹ್ಮಣರಿಗೆ ಕೊಡುವುದು

ಅತ್ತೆ ಮನೆಯವರು ಕೊಟ್ಟ ತಪ್ಪಲೆಯಲ್ಲಿ ಅರಿಷಿನ, ಕುಂಕುಮ, ಉತ್ತತ್ತಿ, ಅಡಕೆ, ಒಣಕೊಬ್ಬರಿ ಬಟ್ಟಲು ಹಾಕಿ ಕುಪ್ಪಸದ ಖಣದಿಂದ ತಪ್ಪಲಿಯ ಬಾಯಿ ಕಟ್ಟಿ ಮೇಲೆ ತೆಂಗಿನಕಾಯಿಯನ್ನು ಇಟ್ಟು ತನ್ನ ತಾಯಿಗೆ ಮಗಳು ಕೊಡಬೇಕು.

## ೧೩. ವ್ರತ ಸಮರ್ಪಣ –

ನಮೋಸ್ತ್ವನಂತಾಯ ಸಹಸ್ರಮೂರ್ತಯೇ ಸಹಸ್ರಪಾದಾಕ್ಷಿ ಶಿರೋರುಬಾಹವೇ । ಸಹಸ್ರನಾಮ್ನೇ ಪುರುಷಾಯ ಶಾಶ್ವತೇ ಸಹಸ್ರಕೋಟಿ ಯುಗಧಾರಿಣೇ ನಮ: ।

ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾ ವಾನುಸೃತ: ಸ್ವಭಾವ: । ಕರೋಮಿ ಯದ್ಯತ್ ಸಕಲಂ ಪರಸ್ಮೈ ನಾರಾಯಣೇತಿ ಸಮರ್ಪಯಾಮಿ ।

ಅನೇನ ಮಯಾಚರಿತಮಂಗಲಗೌರಿ ವ್ರತೇನ ಬ್ರಾಹ್ಮಣ ಸುವಾಸಿನ್ಯಂತರ್ಗತ ಶ್ರೀಮಂಗಲಗೌರೀ ಹೃದಯಾಂತರ್ಯಾಮಿ ಶ್ರೀಭಾರತೀರಮಣ ಮುಖ್ಯ ಪ್ರಾಣಾಂತರ್ಯಾಮಿ ಶ್ರೀ ಲಕ್ಷ್ಮೀನಾರಾಯಣ: ಪ್ರೀಯತಾಮ್ ।

(ರಾತ್ರಿ ಪುನ: ಗೌರಿಗೆ ಶೋಡಶೋಪಚಾರ ಪೂಜಾ ಮಾಡಿ ಹದಿನಾರು ಬತ್ತಿಯಿಂದ ಕೂಡಿದ ನೀರಾಜನವನ್ನು ತೋರಿಸಿ,

ಸುವಾಸಿನಿಯರಿಗೆ ಅರಿಶಿನ ಕುಂಕುಮ ಕೊಟ್ಟು, ಉಡಿ ತುಂಬಿಸಿ, ತಾನು ಆ ರಾತ್ರಿ ಉಪವಾಸವಿದ್ದು, ನೃತ್ಯಗೀತಾದಿಗಳಿಂದ ಆ ರಾತ್ರಿಯಲ್ಲಿ ಜಾಗರಣೆ ಮಾಡಬೇಕು)

## ೧೪. ವಿಸರ್ಜನ –

ಆಚಮ್ಯ । ದೇಶಕಾಲಾದೀನುಚ್ಚಾರ್ಯ । ಮಂಗಲಗೌರೀ ವಿಸರ್ಜನ ಪೂಜಾಂ ಕರಿಷ್ಯೇ । ಮಂಗಲಗೌರ್ಯೈ ನಮ: । ಆಸನಂ ಸಮರ್ಪಯಾಮಿ । ಧ್ಯಾನಂ। ಆವಾಹನಂ । ಅರ್ಘ್ಯಂ । ಆಚಮನಂ । ಮಧುಪರ್ಕಂ । ಪುನರಾಚಮನಂ । ಸ್ನಾನಂ । ವಸ್ತ್ರಯುಗ್ಮಂ । ಹರಿದ್ರಾಂ । ಕುಂಕುಮಂ । ಗಂಧಂ । ಪುಷ್ಪಂ । ಧೂಪಂ ।ನೈವೇದ್ಯಂ । ಮಂಗಲನೀರಾಜನಂ । ಮಂತ್ರಪುಷ್ಪಂ । ಪ್ರದಕ್ಷಿಣ ನಮಸ್ಕಾರಾನ್ । ಛತ್ರ ಛಾಮರಂ ವ್ಯಜನಂ ದರ್ಪಣಂ ಸಮರ್ಪಯಾಮಿ ।

ಯಾಂತುದೇವಗಣಾ: ಸರ್ವೇ ಪೂಜಾಮಾದಾಯ ಪಾರ್ಥಿವೀಮ್।
ಇಷ್ಟಕಾಮ್ಯಾರ್ಥಸಿದ್ಧ್ಯರ್ಥಂ ಪುನರಾಗಮನಾಯ ಚ । ಅನೇನ ವಿಸರ್ಜನ ಪೂಜಾಕರ್ಮಣಾ ಮಂಗಲ ಗೌರ್ಯಂತರ್ಗತ ಜಯಾಪತಿ ಸಂಕರ್ಷಣಾಭಿನ್ನ ಶ್ರೀಲಕ್ಷ್ಮೀನಾರಾಯಣ:ಪ್ರೀಯತಾಮ್। ಕೃಷ್ಣಾರ್ಪಣಮಸ್ತು

# ಮಂಗಳಗೌರಿ ಕಥೆ

ಹಿಂದೆ ಸುಮಂತನೆಂಬ ಬ್ರಾಹ್ಮಣನು ಇದ್ದನು. ಅವನ ಹೆಂಡತಿಯ ಹೆಸರು ಧನವತಿ. ಅವನಿಗೆ ಸಂತಾನವಿರಲಿಲ್ಲ. ಅದನ್ನು ಬಿಟ್ಟರೆ ಬೇರೆ ಎಲ್ಲ ರೀತಿಯಲ್ಲೂ ಸುಖವಾಗಿದ್ದನು. ಅವನು ಒಮ್ಮೆ ಗೌರೀದೇವಿಯನ್ನು ಸಂತಾನಕ್ಕಾಗಿ ಇಪ್ಪತ್ತೊಂದು ದಿನ ಉಗ್ರ ತಪಸ್ಸನ್ನು ಆಚರಿಸಿದನು. (ಸಾಮಾನ್ಯವಾಗಿ ಮಕ್ಕಳಾಗಬೇಕಾದರೆ ನಾವು ಉಮಾ-ಮಹೇಶ್ವರರನ್ನು ಪೂಜಿಸಬೇಕು. ಹಿಂದೆ ಶ್ರೀಕೃಷ್ಣನು ತಾನು ಪ್ರದ್ಯುಮ್ನನನ್ನು ಪಡೆಯಲು ಶಿವನನ್ನು ಕುರಿತು ತಪಸ್ಸನ್ನು ಆಚರಿಸಿದ್ದನು. ಆದರೆ ಕೃಷ್ಣ ಶಿವನ ಕುರಿತು ತಪಸ್ಸನ್ನಾಚರಿಸಿದ್ದಿದು ಕೇವಲ ಲೋಕಶಿಕ್ಷಣಕ್ಕಾಗಿಯೇ ಹೊರತು ಅವನಿಗೆ ಅದರಿಂದೇನೂ ಆಗಬೇಕಾಗಿರಲಿಲ್ಲ). ಸುಮಂತನ ತಪಸ್ಸಿನಿಂದ ಪ್ರಸನ್ನಳಾದ ಗೌರೀದೇವಿಯು ಕೇವಲ ಹದಿನಾರು ವರ್ಷ ಆಯುಸ್ಸುಳ್ಳ ಪುತ್ರನನ್ನು ಕರುಣಿಸಿದಳು. ಒಮ್ಮೆ ಆ ಕುಮಾರನು ತನ್ನ ಸೋದರಮಾವನೊಂದಿಗೆ ಕಾಶಿ ಮುಂತಾದ ಕ್ಷೇತ್ರಗಳಿಗೆ ತೀರ್ಥಯಾತ್ರೆಗೆ ಹೊರಟು ಅಲ್ಲಿ ಒಂದು ಉದ್ಯಾನವನದಲ್ಲಿ ಇಳಿದುಕೊಂಡನು. ಅಲ್ಲಿ ವಿಹಾರವಾಡುತ್ತಿದ್ದ ಕನ್ನಿಕೆಯರಲ್ಲಿ ಜಗಳವುಂಟಾಗಿ ಒಬ್ಬಳು ಮತ್ತೊಬ್ಬಳನ್ನು "ವಿಧವೆಯಾಗು" ಎಂದು ಶಾಪವಿತ್ತಳು.

ಆಗ ಆ ಶಾಪವನ್ನು ಪಡೆದ ಹುಡುಗಿ "ನನ್ನ ತಾಯಿ ಮಂಗಳಗೌರೀ ವ್ರತವನ್ನು ಮಾಡುತ್ತಿರುವಳು. ಈ ಪೂಜಾಕಾಲದಲ್ಲಿ ಧೂಪ ಮಾಡುವ ಧೂಪದ ಹೊಗೆಯನ್ನು ಆಘ್ರಾಣಿಸಿದರೂ ನಮಗೆ

ವೈಧವ್ಯವಿರುವುದಿಲ್ಲವೆಂದ ಮೇಲೆ ಪೂಜೆಯನ್ನೇ ಮಾಡುತ್ತಿರುವಾಗ ನನಗೇನಾಗುವುದಿಲ್ಲ" ಎಂದಳು.

ಈ ಸಂಭಾಷಣೆಯನ್ನು ಆಲಿಸಿದ ಆ ಹುಡುಗನ ಸೋದರಮಾವ ಈ ಕನ್ನಿಕೆಯನ್ನು ನನ್ನ ಅಳಿಯನಿಗೆ ಕೊಟ್ಟು ಮದುವೆ ಮಾಡಿಸಿದರೆ, ಅವನ ಆಯುಸ್ಸು ಹೆಚ್ಚಾಗುವುದು ಎಂದು ಭಾವಿಸಿ, ಆ ಹುಡುಗಿಯ ತಂದೆತಾಯಿಗಳನ್ನು ಸಂಪರ್ಕಿಸಿ ಮದುವೆ ಮಾಡಿಸಿದನು. ಆ ರಾತ್ರಿ ಆ ಹುಡುಗನು ಯಾರಿಗೂ ಹೇಳದೆ ಹೊರಟುಹೋದನು. ಶಿವನು ಹೊರಗೆ ಹೋದರೂ, ಹರನೇ ಆ ಹುಡುಗನ ರೂಪದಲ್ಲಿ ಅಲ್ಲಿ ಮಲಗಿದ್ದನು. ಆ ವಧುವು ತನ್ನ ಗಂಡನ ವಾಪಸ್ಸು ಬರುವಿಕೆಗಾಗಿ ಮಂಗಳಗೌರೀವ್ರತವನ್ನು ಆಚರಿಸಿದಳು. ಹದಿನಾರು ದೀಪಗಳನ್ನು ಬೆಳಗಿಸಿದಳು. ವಾಯನದಾನ ಮಾಡಿ ಬಾಗಿನವನ್ನು ಮುತ್ತೈದೆಯರಿಗೆ ನೀಡಿದಳು. ತಂಬಿಟ್ಟನ್ನು ಎಲ್ಲರಿಗೂ ಹಂಚಿದಳು. ಸರಿಯಾಗಿ ಈ ಸಮಯಕ್ಕೆ ಕುಮಾರನ ಆಯುಸ್ಸು ಮುಗಿದಿತ್ತು. ಪಾರ್ವತಿದೇವಿಯಾದರೂ ತನ್ನ ಪತಿ ಮೃತ್ಯುಂಜಯನ್ನು ಬೇಡಿ ಅವನನ್ನು ದೀರ್ಘಾಯುಷ್ಯವಂತನನ್ನಾಗಿ ಮಾಡಿದಳು. ಸತ್ತು ಪುನ: ಬದುಕಿದ ಕುಮಾರ ಹಾಗೂ ಅವನ ಪತ್ನಿಯು ಸುಮಂತನ ಮನೆಗೆ ಬಂದರು. ಮಂಗಳಗೌರಿಯ ಮಹಿಮೆಯನ್ನು ಕೇಳಿ ಧನವತಿಯೂ ಸಹ ಮಂಗಲಗೌರಿವ್ರತವನ್ನು ಮಾಡಿದಳು, ಸಕಲಫಲಗಳನ್ನೂ ಪಡೆದು ಸುಖವಾಗಿದ್ದಳು.

## ಮಂಗಲಗೌರಿ ಹಾಡು –

ಪರಮ ಸಂತೋಷದಲಿ ಪತಿಯ ಪಾದಕ್ಕೆರಗಿ
ವರದ ಗಣಪತಿಗೆ ವಂದನೆಯ ಮಾಡಿ
ಹರನರಸಿ ಮಂಗಳಗೌರೀದೇವಿ ಕಥೆಯ
ನೊರೆವೆ ಬಲ್ಲಂತ ಸಜ್ಜನರು ಕೇಳಿ ।೧।

ಕೌರವೇಶ್ವರನು ಕುಟಿಲದಿ ಜೂಜನಾಡಿ
ಪುರವ ಬೊಟ್ಟೊರಡಿಸಿದರೆ ಪಾಂಡವರು
ಅಡಪಿಲಿ ವನವಾಸವನಾಚರಿಸುತ ದಿನವ
ಕಳೆಯುತ್ತಿದ್ದರು ಹರಿಯ ಧ್ಯಾನದಿಂದ ।೨।
ಒಂದು ದಿನ ಹರಿಯು ಕಾಮ್ಯಕ ವನಕೆ
ನಡೆತರಲು ಬಂದರೆದುರಿಗೆ ಧೌಮ್ಯಮುನಿ
ಸಹಿತಲೆ ಬಂದು ಪಾಂಡವರು ಮಯ್ಯಿಕ್ಕಿದರು
ಹರಿಪಾದ ದ್ವಂದ್ವದಲ್ಲಿ ದ್ರೌಪದೀದೇವಿ ಸಹಿತ ।೩।
ನಾರಾಯಣ ತಾನು ನಸುನಗುತ
ದ್ರೌಪದಿಗೆ ಹೇಳಿದನು ಪೂರ್ವಜನ್ಮದ
ಕರ್ಮವ ಮಾಡಿ ಅನುಭವಿಸಿದಲ್ಲದೆ
ಬಿಡದು ಚಿಂತಿಸಬೇಡವೆನ್ನುತ್ತಿದ್ದನು ।೪।
ಧರೆಯೊಳಗೆ ಉತ್ತಮ ವ್ರತವು ಯಾವುದು ಎಂದು ।
ನರಹರಿಯು ತನ್ನೊಳಗೆ ತಾನೇ ತಿಳಿದು ।
ಹರನರಸಿ ಮಂಗಳಗೌರಿದೇವಿಯ
ವ್ರತವನಾಚರಿಸೆ ನಿಮ್ಮ ರಾಜ್ಯ ಸಾಧ್ಯವಹುದು ।೫।

# “ಮಂಗಳಗೌರಿವ್ರತ”

ಶ್ರಾವಣಮಾಸದಲಿ ಐದು ಮಂಗಳವಾರ
ಈ ವ್ರತವು ಐದು ವರುಷವಾಚರಿಸಲು ।
ಯಾರು ಮಾಡಿದರು ಮನಸಿನಸಿದ್ಧಿ ಹೌದೆಂದು
ಭಾಮೆ ದ್ರೌಪದಿಗೆ ಹರಿ ನುಡಿದನಾಗ ।೬।
ಯಾರು ಮಾಡಿದರು ಈ ವ್ರತದ ಮಹಿಮೆಗಳೇನು ।
ಏನು ಫಲವೆಂದು ದ್ರೌಪದಿ ಕೇಳಲು ।
ನಾನು ಹೇಳುವೆನು ಕೇಳು । ಮುನ್ನ ಕರ್ನಾಟಕ ।
ದೇಶದೊಳಗೊಬ್ಬ ದೊರೆ ಇರುತ್ತಿದ್ದನು ।೭।
ರನ್ನೆ ಕೇಳು ಶ್ರೀಪಾದನೆಂಬೊ ನಾಮ ।
ಸುವರ್ನಾವತಿಯೆಂಬೊ ಪಟ್ಟಣದಲಿ ।
ತನ್ನ ವಲ್ಲಭೆ ಕನಕ ಮಂಜುಳ ಸಹಿತಲೆ ।
ಚೆನ್ನಾಗಿ ಧರೆಯ ಪಾಲಿಸುತ್ತಿದ್ದನು ।೮।
ಮಕ್ಕಳಿಲ್ಲದ ಅವನು ಮನದ ಸಂತಾಪದಲಿ ।
ಬಿತ್ತಿದಾ ಸಸಿಗೆ ನೀರಿಲ್ಲದಂತೆ ।
ಬತ್ತಿದಾಕೊಳದಂತೆ ಮನದಲ್ಲಿ ಮರುಗುತ್ತ
ಮುಕ್ಕಣ್ಣ ಹರನ ಧ್ಯಾನದಲ್ಲಿದ್ದರು ।೯।
ಪರಮ ಹರಭಕ್ತರು ತನರರಿಲ್ಲದೆ ಅವರು ।
ಮೃಡನ ಪೂಜಿಸುತ್ತಿರಲು ಅನುಗಾಲವು ।
ಹರ ತನ್ನ ಭಕ್ತರ ಮನದ ಚಿಂತೆಯ ತಿಳಿದು ।
ತಿರುಕನಂದದಲಿ ಭಿಕ್ಷೆಗೆ ಬಂದನು ।೧೦।
ಬಂದವನ ಕಾಣುತ್ತ ಕನಕಮಂಜುಳಿ ಮುತ್ತ ।
ತಂದು ಮೊರದೊಳಗೆ ಭಿಕ್ಷವ ನೀಡಲು ।

ಮುಂದೆ ನಿಂತಿಧಾಗೆ ಹರ ತಾನು ಮುಟ್ಟದೆ ।
ತಂದು ಈಶಾನ್ಯ ಮೂಲೆಗೆ ಚೆಲ್ಲಿದ ।  ೧೧ ।
ಯಾವಾಗ ಬಂದರು ನೀಡುವಳು ಭಿಕ್ಷವನು ।
ಮುರಹ ಮುಟ್ಟದಲ್ಲಿಯೇ ಚೆಲ್ಲುವ ।
ಏನು ಕಾರಣವೆಂದು ರಾಯ ಬಂದರೆ ಅವಳ ।
ಭಾವವನು ಹೇಳಿದಳು ಚಿಂತೆಯಿಂದ ।  ೧೨ ।
ನಾಳೆ ಭಿಕ್ಷವ ನೀಡು ನಾನು ನೋಡುತಲಿಹೆನು ।
ಏನು ಕಾರಣವೆಂದು ಕೇಳು ಅವನ ।
ಹೀಗೆ ಚಿಂತಿಸುತ ಕಳೆಯ ಮರುದಿನ ।
ಬಾಗಿಲಿಗೆ ಬಂದು ಭಿಕ್ಷಾ ಎಂದನು ।  ೧೩ ।
ಬಂದವನ ಕಾಣುತ್ತ ಕನಕಮಂಜುಳಿ ಮುತ್ತ ।
ತಂದು ಮೊರದೊಳಗೆ ಭಿಕ್ಷವ ನೀಡಲು ।
ಮನದ ಸಂಶಯವೇನು ಎಂದು ಕೇಳಿದರವನ ।
ತನಯರಿಲ್ಲದೋರ ಭಿಕ್ಷೆ ಮುಟ್ಟೆನೆಂದ ।  ೧೪ ।
ಭಿಕ್ಷುಕನಾಡಿದ ಕಷ್ಟದಾ ನುಡಿ ಕೇಳಿ ।
ಮಕ್ಕಳಿಲ್ಲದ ಜನ್ಮ ವ್ಯರ್ಥವೆಂದು ।
ಧು:ಖಿಸಿ ಸತಿಪತಿಗಳಿಬ್ಬರು ಬಂದು ।
ಮುಕ್ಕಣ್ಣ ಹರನ ಚರಣಕ್ಕೆ ಬಿದ್ದರು ।  ೧೫ ।
ಪರಮ ಭಕ್ತರ ಬಿದಿದಪ್ಪಿ ತಕ್ಕೈಸಿ ।
ತನಯರಿಲ್ಲದೆ ಬಹಳ ನೊಂದೆ ಮಗನೆ ।
ನಿನಗೆ ಮಕ್ಕಳ ಫಲವಿಲ್ಲ ಹದಿನಾರು ವರುಷ ।
ಆಯುಷ್ಯದ ಮಗನ ಕೊಡುವೆನು ಎಂದನು ।  ೧೬ ।

ಒಂದು ಫಲವನು ಕೊಟ್ಟು ನಂದೀಶ್ವರ ಹೋದ ।
ಮಂಜುಳೆಗೆ ಗರ್ಭ ಸ್ಥಿರವಾಯಿತಾಗ ।
ಒಂಭತ್ತು ತಿಂಗಳು ತುಂಬಿ ಹಡೆದಳು ಭೂ
ಮಂಡಲವನ್ನಾಳುವ ಹರಭಕ್ತನ ।೧೭।
ಜ್ಯೋತಿಷ್ಕರಲ್ಲಿ ಹೋಗಿ ಜಾತಕವ ಬರೆಸಿದನು ।
ಪ್ರೀತಿಯಿಂದಲೆ ನಾಮಕರಣ ಮಾಡಿ ।
ದೇವಪಾಲನು ತನ್ನ ತನಯನಿಗೆ ।
ಚಂದ್ರಶೇಖರನೆಂಬೊ ಹೆಸರು ಇಟ್ಟನಾಗ ।೧೮।
ಆಡುವ ಬಾಲಕನ ನೋಡಿ ಹಿಗ್ಗುತಿರಲು ।
ಆದವು ಆರೇಳು ವರುಷದಲಿ ।
ಮಾಡಿ ಮುಂಜಿ ಸಕಲವಿದ್ಯೆಯನು ಕಲಿಸಿದರು ।
ಆರೇಳು ವರುಷವಾಯಿತು ತನಯಗೆ ।೧೯।
ಹದಿನಾರು ವರುಷವಾಗಲು ಅವನಿಗೆ
ತಾಯಿತಂದೆ ತಿಳಿದು ಕಂಕಟವು ಪರಿಹಾರವಾಗಲಿ ।
ಎನುತ ಮಾವನ ಕರೆಸಿ ಕಾಶಿಗೆ ಮಗನ
ಕರೆದುಕೊಂಡು ಹೋಗೆಂದು ಒಪ್ಪಿಸಿದರು ।೨೦।
ಸೋದರಳಿಯನ ಸಹಿತಾ ತಾ ಬಂದನು ।
ಗೊಂಡಾರಣ್ಯವೆಂಬ ಪುರಮಧ್ಯದಲಿ ।
ಆ ದೇಶದ್ದೊರೆಯ ಮಂಡೋರಾಯನಪುರವ ।
ಹುವ್ವಿನ ತೋಟದಲಿ ನಿಂದರವರು ।೨೧।
ಮಂಡೋರಾಯನ ಮಗಳು ಸಂಗಾತಿರೊಡಗೊಂಡು ।
ಒಂದು ದಿನ ಹುವ್ವಿನಾ ವನಕೆ ಬರಲು ।

ಚಂದ್ರಶೇಖರನರಸಿ ಸೋಲು ಮುಡಿಗೆನುತಲೆ ।
ದುಂಡು ಮಲ್ಲಿಗೆ ಹುವ್ವ ಕೊಯ್ಯುತ್ತಿದ್ದಳು । ೨೨ ।
ರಾಯನ ಮಗಳ ಸಂಗಾತ ಬಂದೋರೆಲ್ಲ ।
ಹುವ್ವ ಕೊಯ್ಯುವಾಗ ಒಬ್ಬಳು ಕೋಪಿಸಿ ।
ರಾಜ್ಯಾಧಿಪತಿಯನ್ ಮಗಳೆಂದೂ ನೋಡದೆ ।
ಅವಳು ಬಹಳ ಕಷ್ಟದ ಮಾತು ನುಡಿದಳಾಗ । ೨೩ ।
ನುಡಿದ ಮಾತನು ಕೇಳಿ ನಗುತ ಮನದಲಿ ।
ಮಂಗಳಗೌರಿ ದಯವುಂಟು ಎನಗೆ
ಮಂದಮತಿ ನೀ ನುಡಿದರೇನಾಯಿತೆನಗೆ ।
ಬಂದ ವಿಪತ್ತುಗಳ ಜೈಸುವೆನೆಂದಳು । ೨೪ ।
ಶ್ರಾವಣ ಮಾಸದಲಿ ಐದು
ಮಂಗಳವಾರ ನಾನು ಪೂಜಿಸಿ ।
ಪೂರ್ಣಾಯುಷ್ಯದ ಪತಿಯನು
ಬೇಡುವೆನು ಹರನಲ್ಲಿ ವರವನೆಂದಳು । ೨೫ ।
ಆ ಮಾತನಾಲೈಸಿ ಕೇಳಿದ ಸುಕುಮಾರ ।
ಮಾವಯ್ಯ ನೋಡೋ ಹೆಣ್ಣಿನ ಮಾತನು ।
ರೂಢಿಗೀಶ್ವರನ ದಯೆಯುಂಟಾದರೆ ನಮಗೆ ।
ಈ ಹೆಣ್ಣು ನಮಗೆ ಆಗಬೇಕೆಂದು ನುಡಿದ ।೨೬।
ಮಾಡಿಸಾವರಣೆಯ ಮಗಳ ಮದುವೆಗೆ ವರನು ।
ಹೇಳಿ ಕಳುಹಿಸಿದರೆ ದಿಬ್ಬಣದವರನು ।
ಸಾಗಿ ಬಂದರೆ ಕುಷ್ಟಿ ಸಹಿತ ಮಂಡೋಪುರದ ।
ಹುವ್ವಿನ ತೋಟದಲಿ ನಿಂದರವರು । ೨೭ ।

ಬಾಲಚಂದ್ರಮನಂತೆ ಹೊಳೆವ ಕುಮಾರನು ।
ಇವನು ನಮಗೊಂದು ಫಳಿಗೆ ಎರವು ।
ಕೊಡಿರೆಂದು ದಿಬಣದವರು ಮಾವನ ।
ಆಡಿದ ಮಾತಿಗೆ ನಕ್ಕು ಮಾವ ।। ೨೮ ।
ಹೊನ್ನು ಆಣ ಬೆಳ್ಳಿ ಬಂಗಾರ ಎರವುಂಟು ।
ಚಿನ್ನ ಬೆಳ್ಳಿಯು ಮುಂತಾಗಿ ಉಂಟು ।
ಕನ್ನಿಕೆಗೆ ವರನು ಎರವ ಕೇಳುವರ ।
ಕಣ್ಣಲ್ಲಿ ನಾಕಾಣೆ ನಿಂತೆಂದ ಮಾವ ॥ ೨೯ ॥
ಕಾಲವು ಒದಗೀ ಹೊತ್ತಿಗೆ ಹದಿನಾರು ವರುಷ
ನೋಡಲಾರೆವೆಂದು ಮನದೊಳರಿತು ।
ಯಾವ ಪುಣ್ಯದಲಿ ಬದುಕಿದರೆ ಸಾಕು
ಮದುವೆ ಆಗು ಹೋಗೆಂದು ಕಳಿಸಿದ ಮಾವನು ॥ ೩೦ ॥
ಬೃಹಸ್ಪತಿಯು ಕರೆಸಿ ನಕ್ಷತ್ರಾವನೆ ನೋಡಿಸಿ ।
ಮದುವೆಯು ಲಗ್ನ ನಿಶ್ಚಯ ಮಾಡಿ ॥
ಆ ಕುಷ್ಟಿಯು ಬಚ್ಚಿಟ್ಟು ಸುಕುಮಾರ
ಗೆರೆದರು ಧಾರೆಯಾರರಿಯದೆ ॥ ೩೧ ॥
ಮಾಣಕದ ಗಿಂಡಿಲಿ ಭಾಗೀರಥಿ ತುಂಬಿ ।
ಪ್ರಾಣದೊಲ್ಲಭೆ ಸಹಿತ ಮಂಗಳಧಾರೆ ॥
ಭಾಗ್ಯದಲಿ ಎರೆದು ವಿನಯದಲಿ ಮಂಡೋರಾಯ ।
ದಾನಧರ್ಮದಲ್ಲಿ ದಣಿಸಿದ ವಿಪ್ರರ ॥ ೩೨ ॥
ಮಂಗಳಗೌರಿಯು ಮುಂದೆ ಗ್ರಹದೊಳು
ಸಂಗಾತಲುಂಡು ಇಬ್ಬರು ಮಲಗಿರೆ ।

# “ಮಂಗಳಗೌರಿವ್ರತ”

ಚಂದ್ರಶೇಖರನು ಸ್ವಪ್ನದಿಂದ ತನ್ನ
ಹೆಂಡತಿಯ ಕೂಡೆ ನುಡಿದ ವಿನಯದಿ || ೩೩ ||
ಗಂಡನ್ಹೇಳಿದ ಮಾತು ಕೇಳಿ
ಲಡ್ಡಿಗೆ ತುಪ್ಪ ತಂದು ಬಟ್ಟಲವಳಿಗೆ ।
ತಂದು ಇರಿಸಿದಳು
ದೇವರ ಮನೆಯಾಲಿ || ೩೪ ||
ಮತ್ತೆ ಮಲಗಿರುವಾಗ ಘಟಸರ್ಪ ಮಂಚದ ।
ಬಳಿಗೆ ಬಂದಿತ್ತು ಆ ಸಮಯದಲಿ ।
ಹರನರಸಿ ಮಂಗಳಗೌರಿಯನೆ ಪೂಜಿಸಿ ।
ಶಿರಸಿನಲಿ ತಂದು ಅಕ್ಷತೆ ತಳಿದಳು || ೩೫ ||
ತಳಿದ ಅಕ್ಷತೆಯು ಸರ್ಪದ ಮೇಲೆ ಬೀಳಲು ।
ಆದರಾಯುಷ್ಯವು ಕ್ಷೀಣವಾಯಿತು ||
ಹರನರಸಿ ಮಂಗಳಗೌರಿಯ ದಯದಿಂದ
ಚಿರಂಜೀವಿ ಆಯ್ತು ಕೇಳೆಂದ ಹರಿಯು || ೩೬ ||
ಆಗ ಕಂಡಳು ಫಣಿಯ ನೋಡಿ ಬೆಳಗಾಗುತ್ತ ।
ಏನು ಕಾರಣ ಬಳಿಗೆ ಬಂದಿತೆಂದು ||
ಶೀಘ್ರದಲ್ಲಿ ತಂದು ಕಲಶವ ತುಂಬಿ ಕಂಚುಕ ।
ಬಾಯಿ ಕಟ್ಟಿರಿಸಿ ಮಲಗಿದಳು ಹರುಷದಿ || ೩೭ ||
ಆ ಹೊತ್ತಿನಿರುಳಲ್ಲಿ ಸ್ತ್ರೀಪುರುಷರೊಂದಾಗಿ ।
ಬಹಳ ಸಂತೋಷದಲಿರುತಿರ್ದರು
ಆ ಇರುಳು ಕಳೆದು ಬೆಳಾಗಾಗಿ ಮಾವನ ಕೂಡೆ ।
ಯಾರಿಗ್ಹೇಳದೆ ಕಾಶಿಗ್ಹೊರಟ್ಹೋದರು || ೩೮ ||

ನಾರಾಯಣನ ಭಕ್ತ ಹೋದ ಕಾಶಿಗೆ
ಅತ್ತ ಯಾರು ಅರಿಯರು ಅರುಣ ಉದಯದಲಿ ॥
ಆ ಕುಷ್ಟಿಯ ತಂದು ಹಸೆಯ ಮೇಲೆ ಕುಳ್ಳರಿಸಿ ।
ಭಾಮೆಯನು ಹಸೆಗೆ ಬಾರೆಂದರಾಗ ॥ ೩೯ ॥
ಬಂದು ಕಂಡಳು ಆಗ ಬಿಳಿಮಯ್ಯನು ।
ತನ್ನ ಗಂಡನಲ್ಲಾವೆಂದು ಮನದಲರಿತು ॥
ಹಿಂದಕ್ಕೆ ಹೋಗಿ ಹೇಳಿದಳು ಒಂದು ವರುಷವು ।
ಗಂಡನಲ್ಲದ ವ್ರತವು ತನಗೆಂದಳು ॥ ೪೦ ॥
ತಂದೆ ತಾಯನು ಕರೆದು ಹೇಳಿದಳು ನೀವ್ ಕೊಟ್ಟ ।
ಬಾಲಪ್ರಾಯದ ಗಂಡನಲ್ಲ ಇವನು ॥
ಏನು ಕುಟಿಲವೋ ಕಾಣೆ ತಿಳಿಯಬಾರದಿಂದು ।
ಸಾಗಿಸಿ ಕಳುಹಿಸಿ ದಿಬ್ಬಣದವರನು ॥ ೪೧ ॥
ತಂದೆಯನು ಕರೆದು ಹೇಳಿದಳು ಒಂದು ವರುಷವು
ಅನ್ನ ಛತ್ರವನು ತಂದೆ ನೀ ಮಾಡಿಸೋ ಕೈವೀಳ್ಯವ
ಚಂದದಲಿ ನಾಕೊಟ್ಟು ಗುರುತು ಹೇಲುವೆನು ।
ಹಾಗೆಂದು ಕೈವೀಳ್ಯವನು ಕೊಡುತ್ತಿದ್ದಳು ॥ ೪೨ ॥
ನಾಲ್ಕು ಕಡೆಯಲ್ಲಿ ದಾರಿಮಾರ್ಗದ ಒಳಗೆ ।
ಹೋಗಿ ಬರುವವರು ಅನ್ನವನುಣ್ಣುವುದು ॥
ರಾಯರ ಮಗಳ ಕೈವೀಳ್ಯವನೆ ತಕ್ಕೊಂಡು ।
ಹೋಗೋದು ಎಂದು ನೇಮಿಸಿದರಾಗ ॥ ೪೩ ॥
ಆಳು ಭಟರನು ಅಲ್ಲಲ್ಲಿಗಿರಿಸಿ ದಳಿದದು ।
ಮೀರಿ ಹೋದರೇನು ತಡೆದು ನೀವು ॥

ಭಾಗ್ಯದಲಿ ಬಂದು ಸುದ್ದಿ ಹೇಳಿ ಎನುತಲಿ
ಈ ಬಗೆಯುಲಾರು ತಿಂಗಳು ಕಳೆದರು || ೪೪ ||
ಭಾಗೀರಥಿಗ್‌ಹೋಗಿ ಭಾಗ್ಯ ಸ್ನಾನವ ಮಾಡಿ ।
ಆರೇಳು ತಿಂಗಳಿಗೆ ಬಂದವರು ||
ಕಾವಡಿಯ ಸಹಿತ ತಕ್ಕೊಂಡು ಮಂಡೋಪುರದ ।
ಊರ ಬಾಗಿಲಿಗೆ ಬಂದರು ಇಬ್ಬರು || ೪೫ ||
ಕಾಣುತ್ತ ಚಾರರವರು ಭಾಗ್ಯ ಬಂದ್‌ಹೇಳಿದರು ।
ಬಾ ಎಂದು ಕರೆದವರೆಲ್ಲರನು ||
ಭಾಗ್ಯದಲಿ ಮನ್ನಿಸಿ ಮನೆಗೆ ಕರೆತಂದವರನ ।
ವಾರಿಜಾಮುಖಿ ನೋಡಿ ತಿಳಿದಳಾಗ || ೪೬ ||
ತಂದೆಯನು ಕರೆದು ಹೇಳಿದಳು ।
ಅಂದು ಈತನಿಗೆ ಧಾರೆಯನೆರೆದಿರಿ ||
ನಂಬಿಕೆಯು ಏನೆಂದು ಕೇಳಿದರೊಳಗಿಂದ ।
ತಂದು ಬಿಚ್ಚಿದಳು ಕಲಶವ ಸಭೆಯಲ್ಲಿ || ೪೭ ||
ತೆಗೆದು ನೋಡಿದರೆ ಆ ಸರ್ಪ ಕಂಠಮಾಲೆ ।
ಸರವಾಗಿ ಇರಲು ಅಲ್ಲಿದ್ದ ಜನರು ||
ಹರಸಿ ಕೊರಳಿಗೆಹಾಕಿ ಸಂತೋಷದಿಂದಲಿ ।
ಮುತ್ತೈದೆತನವನು ಪಡೆಯೆಂದರು || ೪೮ ||
ನ್ನ ಗುರುತೇನೆಂದು ಕೇಳಿದರೆ ಕಾಶಿಗೆ ।
ನನ್ನ ಮಾವನ ಕೂಡ ಹೋಗುತ್ತಿದ್ದೆ ||
ನಿಮ್ಮ ಬೀಗನು ತನ್ನ ಮಗನು ಕುಷ್ಟಿಯು ।
ಎಂದು ನಮ್ಮ ಕರೆತಂದು ಧಾರೆಯನೆರೆಸಿದ || ೪೯ ||

ಲಡ್ಡಗೀತಿಂದ ಬಟ್ಟಲ ತಂದರೊಳ್ಗಿನಿಂದ ।
ಮುದ್ರೆ ಉಂಗುರವು ತೋರಿಸೆ ಜನರಿಗೆ ॥
ಪ್ರಜ್ವಲಿತವಾದ ಮುದ್ರೆಯ ಮ್ಯಾಲೆ ।
ಚಂದ್ರಶೇಖರನೆಂಬೋ ಹೆಸರನು ಕಂಡರಾಗ ॥ ೫೦ ॥
ಮಂಡೋರಾಯನು ತನ್ನ ಮಗಳ ತಕ್ಕೈಸಿದನು ।
ಇಂದು ತನ್ನ ಕುಲಕೆ ಕೀರ್ತಿಯನು ತಂದೆ ॥
ಗಂಡನೇಳಿದ ಮಾತು ಮೀರದೆ ಇರುವೆಯೆಂದು
ಚಂದದಲಿ ಮಗಳ ಮುದ್ದಾಡುತ್ತಿದ್ದ ॥ ೫೧ ॥
ಹೀಗೆ ಒಂದೆರಡೊರುಷ ಸ್ತ್ರೀಪುರುಷರೊಂದು ।
ಬಹಳ ಸಂತೋಷದಲಿ ಇರುತಿರ್ದರು ॥
ತಾಯಿತಂದೆಯ ನೆನೆದು ಹೋಗಬೇಕೆನ್ನುತಲಿ ।
ಮಾವಾನ ಕೂಡೆ ಹೇಳಿದ ವಿನಯದಿ ॥ ೫೨ ॥
ಸೋದರಮಾವ ನಮ್ಮೂರಿಗ್‌ಹೋಗೋಣನ್ನು ।
ತಾಯಿತಂದೆಯ ನೋಡ ಬೇಕೆಂದರೆ ॥
ಆನೆ ಕುದುರೆ ಮಂದಿ ದಳಸಹಿತ ಅಳಿಯ
ಕುಮಾರಿಯನೆ ಕಳುಹಿಸಿ ಚಿಂತಿಸುತ್ತಲಿದ್ದ ॥ ೫೩ ॥
ದಾರಿ ಮಾರ್ಗದಲಿ ಬರುವಾಗ ಶ್ರಾವಣಮಾಸ ।
ಆಗ ಬಂದಿತು ತನ್ನ ಮನದಲಿರುತು ॥
ಹೇಳಿದಳು ಪತಿಯೊಡನೆ ನಗುತ ಸಂತೋಷದಲಿ ।
ಮಾಡಬೇಕಲ್ಲ ಗೌರೀವ್ರತವನು ॥ ೫೪ ॥
ದಾರಿಲಿ ವ್ರತವನು ಮಾಡಬಾರದು ಕೇಳು ।
ಊರಿಗ್ ಹೋದಮ್ಯಾಲೆ ಮಾಡೆಂದರು ॥

ಕೇಳು ಕಿರಿಮಯ್ಯ ಒಂದು ಘಳಿಗೆ ತಡವಿಲ್ಲ
ಬಾಲ್ಯದಲಿ ಬಿಡದ ಈ ವ್ರತ ನಿಲ್ಲಿಸಲಿಲ್ಲ || ೫೫ ||
ಗಂಗೆಯಾ ತೀರದಲ್ಲಿ ಮಿಂದು ಮಡಿಯನುಟ್ಟು ।
ಚಂದ್ರಶೇಖರನರಸಿಯು ಭಕ್ತಿಯಿಂದ ||
ಗಂಧಾಕ್ಷತೆ ಪುಷ್ಪ ದೀಪ ಧೂಪಗಳಿಂದ
ಮಂಗಳಾರತಿಯನೆತ್ತಿದರ್ ಹರುಷದಿ || ೫೬ ||
ಹರನರಸಿ ಮಂಗಳಗೌರಿ ನೆಲೆಸಿದ ತಾವು
ಮಣಿಪುರವು ಎಂಬೋ ಪಟ್ಟಣವಾಯಿತು
ದೊರೆ ಮಕ್ಕಳುಂಡು ತಮ್ಮಯ್ಯನಪುರದ
ಸಮೀಪಕ್ಕೆ ಬಂದರವರು || ೫೭ ||
ಹರನ ವರದಲ್ಲಿ ಕೊಟ್ಟ ತನಯನಾ ಮಾತುಳನ
ಕೈಗೆ ಕೊಟ್ಟಾಗ ಮಗನು ಏನಾದನೋ
ಎನುತ ತಾಯಿ ತಂದೆ ಮರುಗುತ್ತಿದ್ದರೆ
ನಿಮ್ಮ ಮಗನು ಬಂದನು ಎಂದು ಹೇಳಿದರು ಬಂದು ||೫೮ ||
ಹೇಳಿದ ಮಾತನು ಕೇಳಿ ಸಂತೋಷದಲಿ
ರಾಣಿಯ ಬಳಿ ಹೇಳಿ ಕಳುಹಿಸಿದರೆ
ರಾಣಿವಾಸವ ಬಿಟ್ಟು ಸಂತೋಷದಲಿ ಸುತನ
ನೋಡಬೇಕೆಂಬೋ ತವಕದಲ್ಲಿದ್ದರು || ೫೯ ||
ಶುಭವಾರ್ತೆ ಹೇಳಿದ ಚರರ ಮನ್ನಿರಿ ಭೂಪ
ಉಡುಗೊರೆಯು ಆಭರಣವ ತರಿಸಿಕೊಟ್ಟು
ಕಲಶ ಕನ್ನಡಿಯು ತೋರಣ ರಚಿಸಿ ಪುರದೊಳಗೆ
ತನಯನ ಕಾಣಲುತ್ಸಾಹದಲ್ಹೊರಟ || ೬೦ ||

ದೂರದಲಿ ತನಯನ ಕಾಣುತಲಿ ಸಂಭ್ರಮದಿ
ಏನು ಕರುಣ ಹರಗೆ ತನ್ನ ಮೇಲೆ
ಕಾಲವಾದ ಮಗನ ಬದುಕಿಸಿ ಕರೆತಂದು
ಯಾರು ಸರಿಯಿಲ್ಲ ಪುಣ್ಯಕ್ಕೆ ಜಗದೊಳು ॥ ೬೧ ॥
ಶುಭಲಗ್ನದಲಿ ಮಗನು ಪುರವ ಹೊಕ್ಕನು ಎಂದು
ಪುರದ ಜನರೆಲ್ಲ ಸಂತೋಷದಿಂದ ಅರಮನೆಗೆ
ಬಂದು ತಾಯಿತಂದೆ ಚರಣಕ್ಕೆ
ಪಳಿವಂಟರಾಗೆ ಸೊಸೆ ಮಗ ಸಹಿತಲಿ ॥ ೬೨ ॥
ಪಳಿವಂಟ ಸೊಸೊ ಮಗನ ಬಿಗಿದಪ್ಪಿ ತಕ್ಕೈಸಿ
ಮಗಳೇ ನೀನ್ಯಾವ ವ್ರತವನ್ನು ಮಾಡಿದೆ
ಎನುತ ಕೇಳಿದರೆ ನಾನೇನರಿಯೇ ಪುರುಷನ
ಚರಣವೇ ಗತಿಯೆಂದು ಇರುತ್ತಿದ್ದೆನು ॥ ೬೩ ॥
ಮಂಜುಳೆಯು ತಮ್ಮನ ಬಿಗಿದಪ್ಪಿ ತಕ್ಕೈಸಿ
ತಂದಿತ್ತೆ ಹೋದ ಮಗನನ್ನು ಬದುಕಿಸಿ
ಎಂದು ನೀ ಧರೆಯೊಳಗೆ ಮಾಡಿದುಪಕಾರವನು
ಎಂದಿಗಾದರೂ ನಿನ್ನ ಮರೆಯಬಹುದೇ ॥ ೬೪ ॥
ಅಕ್ಕಯ್ಯ ನಿನ್ನ ಹೊಟ್ಟೆ ಪುಣ್ಯದಲಿ ನಿನ್ನ ಪುತ್ರ
ಬದುಕಿದನು ಕೇಳಮ್ಮ ತಾಯಿ ।
ಅಲ್ಪದಾಯುಷ್ಯ ಹೋಗಿ ಚಿರಂಜೀವಿಯಾಯ್ತಿವನ
ಮುತ್ತೈದತನ ಉಂಟಾಯಿತು ॥ ೬೫ ॥
ಸೃಷ್ಟೀಗೀಶ್ವರನರಸಿ ಗೌರಿಯನೆ ಪೂಜಿಸಿ
ಮುತ್ತೈದೆತನವನು ಪಡೆದಳು

ಮುತ್ತೈದೆತನವನು ಪುತ್ರ ಸಂತಾನವನ್ನು
ಕೊಟ್ಟು ರಕ್ಷಿಸುವ ಮಂಗಳಗೌರಿಗೆ ॥ ೬೬ ॥

ಮಂಗಳ
ವನಗೌರಿ ಪಾಲಿಸು । ಧರೆಯೊಳು ಎಮ್ಮನು । ಪ ।
ಸಾರಿ ಬೇಡಿಕೊಂಬೆವೀಗ । ಭರದೊಳು । ನಿನ್ನ । ಅ.ಪ ।
ದುಷ್ಟನಾಶಿನೀ ಸೃಷ್ಟಿಪೋಷಣೀದೀನ ಪೋಷಕಳೆ ।
ಕ್ಷೋಣಿಯೊಳ್ ಕೃಷ್ಣೇಂದ್ರನನ್ನು ಸಲಹು ಮಾತೆಯು ।
ಧರೆಯೊಳು ಕಲ್ಯಾಣಪುರಿಯೊಳು ವಾಸಿಪ ।
ವರನನ್ನು ಪೊರೆ ನೀ ಬೇಗ ಸಾರಸನೇತ್ರೆ ॥

॥ಮಂಗಳಗೌರಿ ಹಾಡು ಸಂಪೂರ್ಣಂ ॥